ಶ್ರೀ ಉಮೇಶ್ ವಿ.ಕತ್ತಿ : ಮಾನ್ಯ ಅಧ್ಯಕ್ಷರೇ, ಈ ಗ್ಯಾಂಗ್‌ಮನ್‌ಗಳು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂಬ ದೃಷ್ಟಿಯಿಂದಲೇ ಹಿಂದೆ 1997ರಲ್ಲಿ ಇವರನ್ನು ಕೈಬಿಟ್ಟು ಈಗ ತುಂಡು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ. ಕಳೆದ ಎರಡು ವರ್ಷಗಳಿಂದೀಚೆಗೆ ಮಾತ್ರ ಈ ಅನುಭವವಾಗಿದೆ. ಇದರ ಹೆಚ್ಚಿನ ಮಾಹಿತಿಗಳನ್ನು ಪಡೆದು ಸರಿಯಾದ ರೀತಿಯಲ್ಲಿ ಯಾವುದು ಆಗುತ್ತದೋ ಆ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಸರ್ಕಾರದ ಕರ್ತವ್ಯ. ಆ ದಿಸೆಯಲ್ಲಿ ಕ್ರಮ ಕೈಗೊಳ್ಳುತ್ತೇವೆ ಎಂದು ನಾನು ತಮ್ಮ ಮೂಲಕ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಪುತ್ತೂರು ಬೈಪಾಸ್ ಕಾಮಗಾರಿಗಳು

131 (597) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಪುತ್ತೂರು ಬೈಪಾಸ್ ಕಾಮಗಾರಿಗಳು ಯಾವ ಹಂತದಲ್ಲಿವೆ ? ಈ ಬಗ್ಗೆ ಇಲ್ಲಿಯವರೆಗೆ ಬಿಡುಗಡೆಯಾದ ಮೊತ್ತವೆಷ್ಟು ? ಪಾವತಿಸಿದ ಮೊತ್ತವೆಷ್ಟು ?

(ಆ) ಈ ವರ್ಷದ ಪ್ರಾರಂಭದಲ್ಲಿ ಈ ರಸ್ತೆಯನ್ನು ಡಾಂಬರೀಕರಿಸುವ ಉದ್ದೇಶ ಸರ್ಕಾರಕ್ಕಿದೆಯೇ ಇದ್ದರೆ ಕೈಗೊಂಡ ಕ್ರಮಗಳೇನು ;

ಶ್ರೀ ಉಮೇಶ್ ವಿ.ಕತ್ತಿ (ಲೋಕೋಪಯೋಗಿ ಸಚಿವರು) :

ಅ) ಪುತ್ತೂರು ನಗರದ ಒಟ್ಟು 4.12 ಕಿಮೀ. ಉದ್ದದ ಬೈಪಾಸು ರಸ್ತೆಯಲ್ಲಿ 3.30 ಕಿಮೀ.ವರೆಗೆ ಎರಡನೇದರ್ಜಿಯ ಜಲ್ಲಿ ಹಾಸಲಾಗಿದ್ದು, ಡಾಂಬರೀಕರಣಕ್ಕೆ ಬಾಕಿ ಇದೆ. 3.30 ಕಿಮೀ.ನಿಂದ 4.12 ಕಿ.ಮೀ.ವರೆಗೆಈಗಾಗಲೇ ಡಾಂಬರೀಕರಣ ಪೂರ್ತಿಗೊಂಡಿದೆ. ಪಾವತಿಸಿದ ಮೊತ್ತ 194.11 ಲಕ್ಷ ರೂ.ಗಳು.

ಆ) ಈ ವರ್ಷದಲ್ಲಿ ಡಾಂಬರೀಕರಿಸುವ ಉದ್ದೇಶ ಸರ್ಕಾರಕ್ಕೆ ಇದೆ. ಈಗಾಗಲೇ ಈ ಬಗ್ಗೆ 18.00 ಲಕ್ಷರೂ.ಗಳ ಮೊತ್ತದ ಅಂದಾಜು ಪಟ್ಟಿ ಮಂಜೂರಾತಿ ಆಗಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ. ಗುತ್ತಿಗೆದಾರರು ನೇಮಕವಾಗಿದೆ. ಹಾಗೂ ಈ ರಸ್ತೆಯು ಕಿಮೀ 3.3ರಿಂದ 4.12ರ ಭಾಗವನ್ನು ಈಗಾಗಲೇ ಡಾಂಬರೀಕರಿಸಲಾಗಿದೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ಈ ಕೆಲಸಗಳು ಪ್ರಾರಂಭವಾಗಿ ಸುಮಾರು ಹನ್ನೆರಡು ವರ್ಷಗಳಾಗುತ್ತಾ ಬಂದಿತು. ಈಗಾಗಲೇ ಟೆಂಡರ್ ಅಂಗೀಕರಿಸಲಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ಕಾಮಗಾರಿಗಳು ಇನ್ನೂ ಶುರುವಾಗುತ್ತಿಲ್ಲ. ಹಿಂದಿನ ಪೇಮೆಂಟ್‌ಗಳಾದ ಕಾರಣ ಯಾವುದೇ ಗುತ್ತಿಗೆದಾರರು ಮತ್ತೆ ತಮಗೆ ಟೆಂಡರ್‌ಅನ್ನು ನೀಡಿದ್ದರೂ ಕೂಡ ಆ ಕಾಮಗಾರಿಗಳನ್ನು ಮಾಡುವುದಿಲ್ಲ ಎಂದು ಹೇಳುತ್ತಿದ್ದಾರೆ ಎಂಬುದಾಗಿ ವದಂತಿಗಳು ಕೇಳಿ ಬರುತ್ತಿವೆ. ಇದರಿಂದಾಗಿ ಕೆಲಸ ನಿಂತಿದೆ ಎಂದು ಹೇಳಲಾಗುತ್ತಿದೆ. ಇದು ನಿಜವೇ? ಯಾವಾಗ ಈ ಕಾಮಗಾರಿಯನ್ನು ನಿರ್ದಿಷ್ಟವಾಗಿ ತೆಗೆದುಕೊಳ್ಳುತ್ತೀರಿ ? ಪುತ್ತೂರು ಪಾಸ್ ಆಗಬೇಕಾದರೆ ಸುಮಾರು ಒಂದೂವರೆ ಗಂಟೆಗಳು ಬೇಕಾಗುತ್ತದೆ ಎಂಬ ವಿಚಾರವನ್ನು ತಿಳಿದುಕೊಂಡೇ ಮಾನ್ಯ ಜಿಲ್ಲಾ ಉಸ್ತುವಾರಿ

ಮಂತ್ರಿಗಳು ಈಗಾಗಲೇ ಅದನ್ನು ಉದ್ಘಾಟನೆ ಮಾಡಿ ಮೂರು ತಿಂಗಳು ಕಳೆದಿದೆ. ಆದರೆ ಅದು ಇನ್ನೂ ಕೂಡ ಡಾಂಬರೀಕರಣ ಆಗಿಲ್ಲ. ಏಪ್ರಿಲ್ ತಿಂಗಳೊಳಗಾಗಿ ಈ ಕಾಮಗಾರಿಯನ್ನು ಮುಗಿಸುತ್ತೀರಾ ಎಂಬ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾಗಿ ತಿಳಿಸಬೇಕೆಂದು ಕೋರುತ್ತೇನೆ. ಕಳೆದ ಅಧಿವೇಶನದಲ್ಲಿ ಹಿಂದಿದ್ದ ಲೋಕೋಪಯೋಗಿ ಸಚಿವರು ಮಾರ್ಚ್ 1999ರೊಳಗಾಗಿ ಈ ರಸ್ತೆಯ ಡಾಂಬರೀಕರಣ ಕಾರ್ಯ ಪೂರ್ತಿ ಮುಗಿಸುತ್ತೇವೆ ಎಂದು ಹೇಳಿದ್ದರು. ಮಾರ್ಚ್ 1999 ಇನ್ನೊಂದು ವಾರದೊಳಗಾಗಿ ಮುಗಿಯಲಿದ್ದು ಕಾಮಗಾರಿಗಳು ಅಷ್ಟರೊಳಗೆ ಮುಗಿಯುವ ಸಂಭವವಿಲ್ಲ. ಯಾವಾಗ ಈ ಕಾಮಗಾರಿಯನ್ನು ಶುರು ಮಾಡಲಿಕ್ಕೆ ತಾವು ಗುತ್ತಿಗೆದಾರರಿಗೆ ಸೂಚನೆ ಕೊಡುತ್ತೀರಿ ಮತ್ತು ಯಾವಾಗ ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಎಂಬ ಬಗ್ಗೆ ನನಗೆ ಮಾನ್ಯ ಸಚಿವರು ನಿರ್ದಿಷ್ಟವಾಗಿ ಉತ್ತರಿಸಬೇಕೆಂದು ಕೋರುತ್ತೇನೆ. ರಸ್ತೆ ಉದ್ಘಾಟನೆಯಾಗಿದ್ದರೂ ಕೂಡ ಈ ರೀತಿಯ ಪರಿಸ್ಥಿತಿ ಇದ್ದರೆ, ಇನ್ನು ಉದ್ಘಾಟನೆಯಾಗದ ರಸ್ತೆಗಳ ಪರಿಸ್ಥಿತಿ ಹೇಗೆ? ಎಂಬುದನ್ನು ತಾವು ಆಲೋಚನೆ ಮಾಡಬೇಕಾಗುತ್ತದೆ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೇ, ಈ ಪುತ್ತೂರು ನಗರದ ಬೈಪಾಸ್ ರಸ್ತೆ 4.12 ಕಿ.ಮೀ.ನಷ್ಟು ಉದ್ದ ಇದೆ. ಈಗಾಗಲೇ ಇದರಲ್ಲಿ 3.30 ಕಿ.ಮೀ.ನಷ್ಟು ರಸ್ತೆಯನ್ನು ಗ್ರೇಡ್ 1 ಮತ್ತು ಗ್ರೇಡ್ 2 ಮೆಟ್ಲಿಂಗ್ ಮಾಡಿ ಮುಗಿಸಲಾಗಿದೆ. ಇನ್ನು ಉಳಿದಿರುವುದನ್ನು ಈಗಾಗಲೇ ಡಾಂಬರೀಕರಣ ಮಾಡಿ ಮುಗಿಸಿದ್ದೇವೆ. ಈ 3.30 ಕಿ.ಮೀ.ನಷ್ಟು ರಸ್ತೆಯೇನು ಕಾರ್ಪೆಟಿಂಗ್ ರಸ್ತೆ ಮಾಡಬೇಕಾಗಿದೆ ಅದಕ್ಕಾಗಿ ಈಗಾಗಲೇ 18.00 ಲಕ್ಷ ರೂ.ಗಳ ಮೊತ್ತದ ಅಂದಾಜು ಪಟ್ಟಿಯ ಟೆಂಡರ್‌ನ್ನೂ ಕೂಡ ಕರೆದಿದ್ದೇವೆ. ಮುಂಬರುವ ಜೂನ್ ತಿಂಗಳ ಅಂತ್ಯದೊಳಗಾಗಿ ಈ ಕಾಮಗಾರಿಯನ್ನು ಮುಗಿಸುವಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ತುಮಕೂರು ಶಿವಮೊಗ್ಗ ರಾಜ್ಯ ಹೆದ್ದಾರಿ ದುರಸ್ತಿ

132 (865) ಶ್ರೀ ಎಸ್.ಕುಮಾರ ಬಂಗಾರಪ್ಪ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ತುಮಕೂರು ಶಿವಮೊಗ್ಗ ರಾಜ್ಯ ಹೆದ್ದಾರಿ ವಾಹನ ಸಂಚಾರಕ್ಕೆ ಯೋಗ್ಯ ವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸರ್ಕಾರ ಈ ಹೆದ್ದಾರಿಯನ್ನು ದುರಸ್ತಿಗೊಳಿಸಲು ತೆಗೆದುಕೊಂಡ ಕ್ರಮಗಳೇನು

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು) :

ಅ) ಹೆದ್ದಾರಿಯು ಹಲವೆಡೆ ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಅತೀ ಜರೂರು ದುರಸ್ತಿ ಹಾಗೂ ಗುಂಡಿಗಳನ್ನುಮುಚ್ಚಿ ರಸ್ತೆ ಮೇಲ್ಮೈಯನ್ನು ಸರಿಪಡಿಸಿ, ವಾಹನಗಳ ಸಂಚಾರಕ್ಕೆ ಯೋಗ್ಯವನ್ನಾಗಿಡಲು ಕ್ರಮ ತೆಗೆದುಕೊಳ್ಳಲಾಗಿದೆ. ಈ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಕೇಂದ್ರ ಸರ್ಕಾರ 2:99ರಲ್ಲಿ ಘೋಷಿಸಿದೆ. ಇನ್ನು ಮುಂದೆ ನಿರ್ವಹಣೆಯನ್ನು ಕೇಂದ್ರ ಸರ್ಕಾರದ ಅನುದಾನದಲ್ಲಿ ಮಾಡಲಾಗುವುದು.